# ನವವಿಧ ಭಕ್ತಿ

ಭಕ್ತಿ ಎಂದರೆ ಭಕ್ತನ ಭಗವಂತನಲ್ಲಿರುವ ಉತ್ಕಟವಾದ ಪ್ರೀತಿ - ಪ್ರೇಮ ಭಾವ. 'ನಾರದ ಭಕ್ತಿ ಸೂತ್ರದಲ್ಲಿ' ಭಕ್ತಿಯನ್ನು ಪರಮ ಪ್ರೇಮ ಸ್ವರೂಪ ಎಂಬುದಾಗಿ ಹೇಳಿದ್ದಾರೆ. ಭಗವತ್ಭಾವದಲ್ಲೇ ಸಂಪೂರ್ಣವಾಗಿ ಮುಳುಗಿರುವುದು. ಇದು ಭಕ್ತ - ಭಗವಂತರ ಪರಸ್ಪರ ಪ್ರೀತಿಯೇ.

ಭಕ್ತಿಯು ನವವಿಧವಾದುದೆಂದು ಭಾಗವತರ ಅನಿಸಿಕೆ. ಎಲ್ಲಾ ಹರಿದಾಸರೂ ಭಕ್ತ ಪ್ರಹಲ್ಲಾದನು ಹೇಳಿರುವ ನವವಿಧ ಭಕ್ತಿಯ ಮಾರ್ಗವನ್ನು ತಮ್ಮ ಸಾಧನೆಯ ಮಾಧ್ಯಮವನ್ನಾಗಿಟ್ಟುಕೊಂಡಿದ್ದಾರೆ. ಭಕ್ತಿ ಮಾರ್ಗವನ್ನು ಹಿಡಿದು ಅದರಲ್ಲಿ ಸಾಧನೆ ಮಾಡಲು ಹಾಡನ್ನು ಮಾಧ್ಯಮವನ್ನಾಗಿ ಆಯ್ದುಕೊಂಡ ಅನೇಕ ಭಕ್ತಿ ಪಂಥಗಳು ನಮ್ಮ ದೇಶದಲ್ಲಿ ಆಗಿ ಬಂದಿವೆ. ಹೀಗೆ ಅನೇಕ ಸಂತರು ಕೂಡ ಆಗಿ ಹೋಗಿದ್ದಾರೆ.

ಭಕ್ತಿ ಎನ್ನುವುದು ಒಂದೇ ಆದರೆ, ಭಕ್ತರು ತೋರುವ ಭಕ್ತಿಯ ಲಕ್ಷಣಗಳು ಒಂಬತ್ತು (೯). ಆದರೆ ಇವೆಲ್ಲವೂ ಒಂದಕ್ಕೊಂದು ಹೆಣೆದು ಕೊಂಡಿವೆ. ಅವು ಈ ಕೆಳಗಿನಂತಿವೆ:

| | | |
|---|---|---|
| ೧. ಶ್ರವಣ | ೬. ವಂದನ | |
| ೨. ಕೀರ್ತನ | ೭. ದಾಸ್ಯ | |
| ೩. ಸ್ಮರಣ | ೮. ಸಖ್ಯ | ಹಾಗು |
| ೪. ಪಾದ ಸೇವನ | ೯. ಆತ್ಮ ನಿವೇದನ | |
| ೫. ಅರ್ಚನ | | |

ಶ್ರೀಮದ್ ಭಾಗವತದ ಸಪ್ತಮ ಸ್ಕಂದದಲ್ಲಿ ಪ್ರಹಲ್ಲಾದ ರಾಜರು ಈ ಭಕ್ತಿಯ ಒಂಬತ್ತು ಲಕ್ಷಣಗಳನ್ನು ತಿಳಿಸಿದ್ದಾರೆ: "ಶ್ರವಣಂ, ಕೀರ್ತನಂ, ವಿಷ್ಣೋ: ಸ್ಮರಣಂ, ಪಾದ ಸೇವನಂ, ಅರ್ಚನಂ, ವಂದನಂ, ದಾಸ್ಯಮ್, ಸಖ್ಯಾಂ, ಆತ್ಮ ನಿವೇದನಂ" ಎನ್ನುವ ಒಂಬತ್ತು ಲಕ್ಷಣಗಳನ್ನು ಅನುಸರಿಸಿ ಶ್ರೀ ಹರಿಯನ್ನು ಸೇರುವ ಸುಲಭ ಮಾರ್ಗವನ್ನು ಹೇಳಿದ್ದಾರೆ.

ಪುರಂದರ ದಾಸರು ತಮ್ಮ ಒಂದು ಉಗಾಭೋಗದಲ್ಲಿ ಹೇಳಿದ್ದಾರೆ:

ಹರಿ ಶ್ರವಣ, ಕೀರ್ತನ, ಹರಿನಾಮ ಸ್ಮರಣ,
ಹರಿ ಪಾದ ಸೇವನ, ಹರಿ ಪೂಜಾ ವಂದನ,

ಹರಿ ದಾಸ್ಯ, ಸಖ್ಯತ್ವ, ಹರಿಗಾತ್ಮಾರ್ಪಣ,
ಹರಿ ಭಕ್ತಿಯೇ ಮುಕ್ತಿಪಥ ತತ್ವ
ಪುರಂದರ ವಿಠ್ಠಲನೆ ಪರಮಾತ್ಮ ಸಿದ್ದ
ವಾರ ಮಧ್ವಮತ ಶ್ರುತಿ ಸ್ಮೃತಿಯೊಳ್ ಪ್ರಸಿದ್ದ.

ಈ ಒಂಬತ್ತರಲ್ಲಿ ಹಿಂದಿನದು ಮುಂದಿನದಕ್ಕೆ ಉಪಪಾದಕ ಮತ್ತು ಸಾಧಕ. ಹರಿಕಥಾ ಶ್ರವಣ ಮೊದಲ ಹೆಜ್ಜೆ. ಆತ್ಮ ನಿವೇದನ ಕಡೆಯ ಹೆಜ್ಜೆ. ಹರಿಯೇ ತನ್ನ ಅಂತರ್ಯಾಮಿಯಾಗಿ ತನಗೆ ನಿಯಾಮಕ, ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ ತನಗೆ ಸ್ವಾಮಿ, ತಾನು ಮಾಡುವ ಸಕಲವೂ ಹರಿಸೇವೆ ಎಂಬ ಭಾವನೆಯೇ ಆತ್ಮ ನಿವೇದನವೆನಿಸಿಕೊಳ್ಳುತ್ತದೆ. ನಾರಾದರೂ ಭಕ್ತಿಯಲ್ಲಿ ಸರ್ವ ಸಮರ್ಪಣ ಭಾವವೇ ಮುಖ್ಯವೆಂದು ಹೇಳಿದ್ದಾರೆ. ಮತ್ತು ಪರಮಾತ್ಮನನ್ನು ಮರೆತಾಗ ದುಗುಡ ಉಂಟಾಗುವುದು ಭಕ್ತಿಯ ಲಕ್ಷಣ. ಇದು ಆರ್ತಭಾವ ಎನಿಸಿಕೊಳ್ಳುತ್ತದೆ.

ಭಕ್ತಿಯಲ್ಲಿ ತಾರತಮ್ಯವಿದೆ. ಮೂಢ ಭಕ್ತಿ, ಭಕ್ತಿ, ಪಕ್ವ ಭಕ್ತಿ, ಪರಿಪಕ್ವ ಭಕ್ತಿ, ಅತಿ ಪಕ್ವ ಭಕ್ತಿ ಎಂದು ಹೇಳುತ್ತಾರೆ. ಜ್ಞಾನ ಇಲ್ಲದೆ ಮಾಡುವ ಭಕ್ತಿ ಮೂಢ ಭಕ್ತಿ. ಮೊದಲು ಹೇಳಿದ ಶ್ರವಣ ಭಕ್ತಿ ಕಡ್ಡಾಯ. ಅದರಿಂದ ಉತ್ಪತ್ತಿಯಾದ ಜ್ಞಾನ, ಅದರಿಂದ ಬಂದ ತತ್ವ ಭಕ್ತಿ, ನಂತರ ತತ್ವದ ನಿಶ್ಚಯ, ನಂತರ ಧ್ಯಾನ. ಇದರಿಂದ ಭಕ್ತನು ಅಪರೋಕ್ಷ ಜ್ಞಾನಿಯಾಗಿ ಮೋಕ್ಷ ಪಡೆಯುತ್ತಾನೆ. ಹಂತ ಹಂತವಾಗಿ ಮಾಡುವ ಕಾರ್ಯಗಳಿಗೆ ಭಕ್ತಿಯು ಶ್ರೇಷ್ಠವಾಗಿ ಮೂಡುತ್ತದೆ. ಇದರಿಂದ ದೇವರು ಪ್ರಸನ್ನನಾಗುತ್ತಾನೆ.

## 1. <u>ಶ್ರವಣ ಭಕ್ತಿ</u>

ಪರಮಾತ್ಮನ ಮಹತ್ತರವಾದ ಕಥೆಗಳನ್ನು, ಆತನ ಲೀಲೆಗಳನ್ನು, ನಿರಂತರವಾಗಿ ನಿಶ್ಚಲವಾಗಿ, ಮನಸ್ಸಿಟ್ಟು, ಚೆನ್ನಾಗಿ ಅರ್ಥೈಸಿಕೊಂಡು, ಆತನಲ್ಲಿ ಸಂಪೂರ್ಣ ನಂಬಿಕೆ ಮತ್ತು ಭಕ್ತಿ ಇಟ್ಟು ಕೇಳುವುದು. ಇದೊಂದು ಸುಲಭ ರೀತಿಯಲ್ಲಿ ಮುಕ್ತಿ ಪಡೆಯಲು ಇರುವ ಮಾರ್ಗ. ಇದಕ್ಕೆ ಉತ್ಕೃಷ್ಟವಾದ ಉದಾಹರಣೆ : ಪರೀಕ್ಷಿತ ಮಹಾರಾಜರ ಭಾಗವತ ಕಥಾ ಶ್ರವಣ.

ಚಂಚಲ ಮನಸ್ಸು ನಿಶ್ಚಲವಾಗಿರ ಬೇಕೆಂದರೆ ಏನು ಮಾಡಬೇಕೆಂಬ ಪ್ರಶ್ನೆಗೆ ಶ್ರೀ ಕೃಷ್ಣ ಪರಮಾತ್ಮ ಹೇಳುತ್ತಾನೆ - "ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹತೇ". ಇದರ ಅರ್ಥ : ಚಂಚಲವಾದ ಮನಸ್ಸು ಧೃಡವಾಗಿರಬೇಕಾದರೆ ಸರ್ವ ಶಬ್ದ ವಾಚ್ಯನಾದ ಪರಮಾತ್ಮನ ಗುಣಗಾನವನ್ನು ಹರಿಕಥೆಯನ್ನು ಸದಾ ಶ್ರವಣ ಮಾಡಬೇಕು.

ಶ್ರವಣ ಭಕ್ತಿಯೇ ಸಾಧನ ಮಾರ್ಗದ ಮೊದಲನೇ ಹಂತ. ಈ ಹಂತದಿಂದ ಮೋಕ್ಷ ಮಾರ್ಗದಲ್ಲಿ ಸಾಗಲು ಶ್ರವಣ ಭಕ್ತಿಯೇ ಮೊದಲ ಮೆಟ್ಟಿಲು. ಇದರಿಂದ ಉತ್ಪತ್ತಿಯಾದ ಜ್ಞಾನದಿಂದ ಮುಂದೆ ಮುಂದೆ ಸಾಗಿ ನವವಿಧ ಭಕ್ತಿಯನ್ನು ಅನುಸರಿಸಿ, ಅಪರೋಕ್ಷ ಜ್ಞಾನಿಯಾಗಿ ಭಕ್ತನು ಮೋಕ್ಷ ಪಡೆಯುತ್ತಾನೆ.

ಉದಾಹರಣೆಗಳು:

- ಹರಿಕಥಾ ಶ್ರವಣ ಮಾಡೋ ನಿರಂತರ ....,

# 2. ಕೀರ್ತನ ಭಕ್ತಿ

ಭಗವಂತನ ಅನಂತ ಗುಣಗಳನ್ನು ಹೇಳುವುದು, ಕೀರ್ತಿಸುವುದು, ಸ್ತುತಿಸುವುದು ಕೀರ್ತನ ಭಕ್ತಿ.

ಶ್ರೀಪಾದರಾಜರು ಉಗಾಭೋಗ ವೊಂದರಲ್ಲಿ ಹೀಗೆ ಹೇಳಿದ್ದಾರೆ: "ಧ್ಯಾನವು ಕೃತ ಯುಗದಿ, ಯಜನ ಯಜ್ಞವು ತ್ರೇತಾ ಯುಗಾದಿ, ದಾನವಾಂತಕ ಅರ್ಚನೆ ದ್ವಾಪರ ಯುಗದಿ, ಮಾನವರಿಗೆಷ್ಟು ಫಲವೋ ಅಷ್ಟು ಫಲವು ಕಲಿಯುಗದಿ ಗಾನದಲಿ ಕೇಶವನೇನಲು ಕೈಗೂಡುವನು ರಂಗ ವಿಠ್ಠಲ".

ದಾಸ ಸಾಹಿತ್ಯದ ಮುಖ್ಯ ಮಾಧ್ಯಮವೆಂದರೆ ಕೀರ್ತನೆಗಳು. ಭಗವಂತನನ್ನು ಕೀರ್ತಿಸುವುದೇ ಮುಖ್ಯ ಉದ್ದೇಶ. ಪೂರ್ಣ ಫಲ ಪಡೆಯಲು ತನ್ಮಯತೆಯಿಂದ ಭಗವಂತನನ್ನು ಸ್ತುತಿಸುವುದು. ಭಕ್ತಿಯ ಪರಿಪಾಕವೇ ಗಾನ, ಕೀರ್ತನ. ಈ ಕಾರಣದಿಂದಲೇ ಹರಿದಾಸರು ಸಂಗೀತ ಮಾಧ್ಯಮವನ್ನು ಅನುಸರಿಸಿರಬೇಕು. ಇದು ಭಕ್ತ ಮತ್ತು ಭಗವಂತನ ನುಡುವಿನ ಭಾಂಧವ್ಯವನ್ನು ಗಟ್ಟಿಗೊಳಿಸಿತು.

ಈ ಕೀರ್ತನೆಯನ್ನು ಶ್ರೀಮದ್ ಭಾಗವತದಲ್ಲಿ ಯಜ್ಞ ಎಂದು ಕರೆದರು. ಹವಿಸ್ಸನ್ನು ಸ್ವೀಕಾರ ಮಾಡುವುದು ಒಂದು ಅರ್ಥವಲ್ಲದೆ ತನ್ನೊಳಗಿದ್ದದ್ದನ್ನು ತನ್ನದಲ್ಲ ಎಂದು ತಿಳಿದು, ಅಹಂಕಾರಾದಿಗಳನ್ನು ಬಿಟ್ಟು, ಭಗವಂತನದೇ ಇದು, ಆತನಿಗೆ ಸಮರ್ಪಣೆ ಎಂದು ಹಾಡುವುದೇ ಸರಿಯಾದ ಕೀರ್ತನ ಯಜ್ಞ.

ಪುರಂದರ ದಾಸರು ತಮ್ಮ ಕೀರ್ತನೆಗಳ ಮುಖಾಂತರ ಸಂಸಾರದಲ್ಲಿದ್ದುಕೊಂಡೇ ಆಧ್ಯಾತ್ಮದ ಅನುಕರಣೆ ಮಾಡುವ ಮಾರ್ಗವನ್ನು ಅತ್ಯಂತ ಸರಳ ರೂಪಗಳಲ್ಲಿ ನಿರೂಪಿಸಿದ್ದಾರೆ.

ಉದಾಹರಣೆ: ನಾರದ ಮುನಿಗಳು

# 3. ಸ್ಮರಣ ಭಕ್ತಿ

ಶ್ರವಣ, ಕೀರ್ತನಗಳಿಂದ ಸಂಗ್ರಹಿಸಿದ ಭಗವನ್ನಾಮ ರೂಪ - ಗುಣಾದಿಗಳನ್ನು ಸ್ಮರಿಸುವುದು ಸ್ಮರಣ ಭಕ್ತಿ.
ಶ್ರವಣ ಮಾಡಿದ್ದನ್ನು ಕೀರ್ತನೆ ಮಾಡಬೇಕು. ಶ್ರವಣ ಕೀರ್ತನೆ ಮಾಡಿದ್ದನ್ನು ಪುನಃ ಪುನಃ ಸ್ಮರಣೆ ಮಾಡುತ್ತಲೇ ಇರಬೇಕು. ಸ್ಮರಣೆ ಎನ್ನುವ ಅಗ್ನಿ ಮನಸ್ಸಿನಲ್ಲಿನ ಕಲ್ಮಶಗಳನ್ನು ಸುಟ್ಟು ಹಾಕುವ ದೊಡ್ಡ ಸಾಧನೆಯ ಅಂಗ.

ಪರಮಾತ್ಮನ ಸ್ಮರಣೆ ಗಾನದಿಂದಲೇ ಅಲ್ಲದೆ ಆತನ ಚಿಂತನೆಯು ಇರಬೇಕು ಎಂದರ್ಥ. ಪ್ರತಿಯೊಂದು ಜಡ - ಚೇತನ ಪದಾರ್ಥಗಳಲ್ಲಿ ಪರಮಾತ್ಮನ ವಿಭೂತಿ ರೂಪಗಳ ಚಿಂತನೆ, ಅದರ ಗುಣ ಪರಮಾತ್ಮನಿಂದಲೇ ಎನ್ನುವ ಚಿಂತೆ, ಇತ್ಯಾದಿಗಳು ಸಹ ಸ್ಮರಣ ಭಕ್ತಿಯ ಅಂಗಗಳೇ ಆಗಿವೆ.
ಸ್ಮರಣ ಭಕ್ತಿಯು ಎಷ್ಟು ಮುಖ್ಯವೆಂದು ಶ್ರೀ ಪುರಂದರ ದಾಸರು ಹೀಗೆ ಹೇಳಿದ್ದಾರೆ:

- ಹರಿ ಸ್ಮರಣೆ ಮಾಡೋ ನಿರಂತರ .... ಪರಗತಿಗೆ ಇದು ನಿರ್ಧಾರ ...
- ಹರಿ ಹರಿ ಎನ್ನಲಿಕ್ಕೆ ಹೊತ್ತಿಲ್ಲ ....
- ಹರಿ ಇನ್ನು ಹರಿ ಇನ್ನು ಪ್ರಾಣಿ ...
- ಹರಿಯ ನೆನೆಯಿರೋ ನಮ್ಮ ಹರಿಯ ನೆನೆಯಿರೋ ....
- ಸ್ಮರಣೆ ಒಂದೇ ಸಾಲದೇ ... ಗೋವಿಂದನ ನಾಮ ಒಂದೇ ಸಾಲದೇ ....
- ಹರಿಯ ನೆನೆಯದ ನರ ಜನ್ಮವೇಕೆ ....
- ಹರಿಯೆಂದು ಮನದಲ್ಲಿ ಮರೆದೊಮ್ಮೆ ನೆನೆದರೆ ....

ಹೀಗೆ ಅನೇಕ ಕೃತಿಗಳಲ್ಲಿ ಸ್ಮರಣ ಭಕ್ತಿಯೇ ಪರಗತಿಗೆ ಅಂದರೆ ಮೋಕ್ಷಕ್ಕೆ ಸುಲಭ ದಾರಿ ಎಂದು ಸಾರಿ ಹೇಳಿದ್ದಾರೆ.

## 4. ಪಾದ ಸೇವನ ಭಕ್ತಿ

ನಿರ್ಮಲ ಮನಸ್ಸಿನಿಂದ ಶ್ರೀ ಹರಿಯ ಪಾದಗಳನ್ನು, ಸದ್ಗುರುಗಳ ಪಾದಗಳನ್ನು ಸೇವಿಸುವುದು ಪಾದ ಸೇವನ ಭಕ್ತಿ. ಉದಾಹರಣೆ: ಶ್ರೀ ಲಕ್ಷ್ಮಿ ದೇವಿ, ಶ್ರೀ ರಾಮನ ಅನುಜ - ಲಕ್ಷ್ಮಣ, ಶ್ರೀ ಹನುಮಂತ.

ಶ್ರೀ ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹನುಮಂತ ದೇವರ ನಿದರ್ಶನ ಕೊಟ್ಟು ಪಾದ ಸೇವನ ಭಕ್ತಿಯ ಬಗ್ಗೆ ಹೇಳಿದ್ದಾರೆ. ಯುದ್ಧದಲ್ಲಿ ಉಳಿದವರಿಗಿಂತ ಅಧಿಕವಾಗಿ ಶ್ರೀ ರಾಮ ದೇವರ ಸೇವೆಸಲ್ಲಿಸಿದ್ದ ಹನುಮಂತ ದೇವರಿಗೆ ಶ್ರೀ ರಾಮಚಂದ್ರ ದೇವರು ಏನು ಬೇಕು ಕೇಳು ಎಂದಾಗ ಅನುಗಾಲವೂ ನಿನ್ನ ಪಾದಸೇವೆ ಸಲ್ಲಿಸುವಂತಹ ಭಾಗ್ಯ ಕೊಡು ಎನ್ನುತ್ತಾರೆ. ಎಲ್ಲದಕ್ಕಿಂತ ಮಿಗಿಲಾದ

ನಿನ್ನ ಪಾದ ಕಮಲದಲ್ಲಿ (ಸೇವಾ ಭಾಗ್ಯದ) ಭಕ್ತಿಯ ಬದುಕೇ ನನಗೆ ಸದಾ ಇರಲಿ ಎಂದು ಪ್ರಾರ್ಥಿಸಿದ್ದಾರೆ. ಎಂದೂ ಕುಂದದಿರುವ ಭಕ್ತಿ ಕ್ಷಣ ಕ್ಷಣಕ್ಕೂ ಅಭಿವೃದ್ಧಿಯಾಗುತ್ತಿರಲಿ, ನಿನ್ನ ಅನುಗ್ರಹ ಸದಾಕಾಲವಿರಲಿ ಎಂದು ಶ್ರೀ ಹನುಮಂತ ದೇವರು ಶ್ರೀ ರಾಮ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರೆಂದು ಹೇಳುತ್ತಾರೆ.

ಶ್ರೀ ಹನುಮಂತ ದೇವರ ಈ ಆದರ್ಶ ನಿಜಕ್ಕೂ ಅನುಕರಣೀಯವಾಗಿದೆ. ಕೇವಲ ಮನುಷ್ಯನಾಗಿ ಬದುಕಿದರೆ ಸಾಲದು. ಬದುಕಿರುವಷ್ಟು ಕಾಲ ಭಗವಂತನ ಪಾದಕಮಲಗಳಲ್ಲಿ ಭಕ್ತಿ ಇಟ್ಟಿರಬೇಕು. ಭಗವಂತನಲ್ಲಿ ಏನಾದರೂ ಬೇಡುವುದೇ ಆದರೆ ಶ್ರೀ ಹನುಮಂತ ದೇವರಂತೆ ಕ್ಷಣ ಕ್ಷಣಕ್ಕೂ ಅಭ್ಯೃದ್ಧಿಯಾಗುವ ಭಕ್ತಿಯನ್ನೇ ಬೇಡುವುದು ಅವಶ್ಯ. ಇದರಿಂದ ಈ ನಮ್ಮ ಬದುಕು ಸಾರ್ಥಕವಾಗುತ್ತದೆ.

ವಿಜಯ ದಾಸರು ಸುಂದರವಾಗಿ ಹೇಳಿದ್ದಾರೆ: ಮನಸ್ಸನ್ನು ನಿಶ್ಚವಾಗಿ ಇರಿಸಿದಲ್ಲಿ ಪರಮಾತ್ಮನ ಚರಣಕಮಲ ಕಾಣುವೆ, ಅಂದರೆ ಮೋಕ್ಷ ಪಡೆಯಲು ಸಾಧ್ಯ ಎಂದು. ಪರಮಾತ್ಮನ ಪಾದ ಸೇವೆಯನ್ನು ಸದಾ ಕಾಲ ಮಾಡುವವರು ಶ್ರೀ ಮಹಾಲಕ್ಷ್ಮಿ ದೇವಿ ಮಾತ್ರ.

ದಾಸರ ಕೃತಿಗಳ ಉದಾಹರಣೆಗಳು:

- ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ ....
- ಹರಿಪಾದ ಯುಗಳವ ನಿತ್ಯ ನೆನೆದವಗೆ ....
- ನಂಬಿದೆ ನಿನ್ನ ಪಾದವ ವೆಂಕಟರಮಣ ....

ಇತರೆ ಉದಾಹರಣೆಗಳು:

1. ರಾಮನ ಪಾದುಕೆಗಳನ್ನ ಭಕ್ತಿಯಿಂದ ಸೇವೆ ಮಾಡಿ ರಾಜ್ಯವನ್ನು ಆಳಿದ ತಮ್ಮ ಭರತ.
2 . ರಾಮನ ಪಾದ ಸೋಕಿ ಶಿಲೇಯಾಗಿ ಇರುವ ಅಹಲ್ಯೆ ತನ್ನ ರೂಪವನ್ನು ಪಡೆದಳು.
3 . ರಾಮನ ಪಾದವನ್ನು ತೊಳೆದು ಧನ್ಯನಾದ ಗುಹ(ನಾವಿಕೆ ನಡಿಸುವ).
4 ಕೃಷ್ಣನ ಪಾದ ಚಿಹ್ನೆ ಕಾಳಿಂಗನ ರಕ್ಷಿಸಿತು.
5 . ಕೃಷ್ಣನ ಪುಟ್ಟ ಪಾದ ಚಿಹ್ನೆ ನೋಡಿ, ಅಕ್ರೂರ ತನ್ನ ರಥದಿಂದ ಇಳಿದು ಮಣ್ಣಲ್ಲಿ ಹೊರಳಿ ಸೇವೆಮಾಡಿದ.
6 . ಅರ್ಜುನ ಶ್ರೀಕೃಷ್ಣನ ಪಾದ ಹತ್ತಿರ ಕೂತು ಕೃಷ್ಣನ್ನೇ ಪಡೆದ.
7 . ವಿಷ್ಣುಪಾದ ದಿಂದ ಗಯಾಸುರನ ಉದ್ಧಾರವಾಯ್ತು.
8 . ವಿಷ್ಣು ಪಾದ ನಖದಿಂದ ಹುಟ್ಟಿರುವಳು ಗಂಗೆ(ವಿಷ್ಣುಪದಿ). ಆದಕಾರಣ ಗಂಗೆ ನದಿಗಳಲ್ಲಿ ಶ್ರೇಷ್ಠ.
9 . ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದು ಬಲಿಯನ್ನು ನಿಗ್ರಹಮಾಡಿದ. ಅವನಿಗೆ ಮುಂದಿನ ಇಂದ್ರ ಪದವಿಕೊಟ್ಟ.

10. ಬ್ರಹ್ಮಾದಿ ದೇವತೆಗಳು ತಮ್ಮ ಕಿರೀಟವನ್ನು ಪರಮಾತ್ಮನ ಚರಣಕ್ಕೆ ಮುಟ್ಟಿಸಿ ಕೃತಾರ್ಥರಾಗುತ್ತಾರೆ.
11. ಪರಮಾತ್ಮನ ಎಡಪಾದ ಜ್ಞಾನವನ್ನು, ಬಲಪಾದ ಆನಂದವನ್ನು ಕೊಡುತ್ತವೆ.
12. ಮೂಲೇಶನ ಪಾದವನ್ನು ಆಶ್ರಯಿಸಿ ಮುಖ್ಯಪ್ರಾಣ ನಮ್ಮ ಹೃದಯದಲ್ಲಿ ಇರುತ್ತಾನೆ. ಮುಖ್ಯಪ್ರಾಣ ಪಾದವನ್ನು ಆಶ್ರಯಿಸಿ ಜೀವ ಸದಾ ಇರುತ್ತಾನೆ.
13. ಪುರುಷಸೂಕ್ತದಂತೆ "ಪದ್ಭ್ಯಾಮ್ ಶೂದ್ರೋ ಅಜಾಯತ". ಮೂಲ ವಿರಾಟ್ ಪುರುಷ ಪಾದದಿಂದ ಶೂದ್ರ ವರ್ಣಕ್ಕೆ ಅಭಿಮಾನಿ ದೇವತೆಗಳಾದ ನಿಋತಿ ಹುಟ್ಟಿದನು.

## 5. ಅರ್ಚನ ಭಕ್ತಿ

ಶ್ರವಣ, ಕೀರ್ತನ, ಸ್ಮರಣ ಮತ್ತು ಪಾದ ಸೇವನ ಭಕ್ತಿಗಳಿಂದ ಶುದ್ಧಾತ್ಮರಾಗಿ, ಶ್ರದ್ಧೆಯಿಂದ, ಶಾಸ್ತ್ರೋಕ್ತ ವಿಧಾನದಿಂದ ಭಗವಂತನಿಗೆ ಪೂಜೆ ಸಲ್ಲಿಸುವುದೇ ಅರ್ಚನ ಭಕ್ತಿ.
ಉದಾಹರಣೆ: ಅಂಬರೀಷ, ಪೃಥು ಮಹಾರಾಜರು.

ಅರ್ಚನೆಯು ಕೇವಲ ಬಾಹ್ಯ ಪೂಜೆಯಾಗಿರದೇ ಮನಸ್ಸಿನಿಂದ ಪೂರ್ತಿಯಾಗಿ ದೇವರ ಪಾದಗಳಲ್ಲಿ ಲೀನವಾಗಿ ಪೂಜೆಯನ್ನು ದೇವರಿಗೆ ಸಲ್ಲಿಸಬೇಕು. ದೇವರಿಗೆ ಮಾಡುವ ಪ್ರತಿಯೊಂದು ಅಲಂಕಾರದಲ್ಲಿಯೂ, ನೈವೇದ್ಯದಲ್ಲಿಯೂ ಪರಮಾತ್ಮನ ಅನುಸಂಧಾನವನ್ನು ಮಾಡಿ ಸಮರ್ಪಣೆ ಮಾಡಬೇಕು. ಗಜೇಂದ್ರನು ಹೂವುಗಳಿಂದ, ಶಬರಿ ಹಣ್ಣಿನಿಂದ, ಸುಧಾಮ ಅವಲಕ್ಕಿ ನೀಡಿ ಪರಮಾತ್ಮನನ್ನು ಸಂತೋಷ ಪಡಿಸಿದಂತೆ ನಮ್ಮ ಅರ್ಚನೆ, ಪೂಜಾದಿಗಳು ಮಾನಸ ಪೂಜೆಯಿಂದಲೂ ಒಡಗೂಡಿ ದೇವರಿಗೆ ಸಮರ್ಪಿಸಬೇಕು.

ಈ ರೀತಿಯ ಅರ್ಚನೆಯಿಂದ ನಮ್ಮ ಮನಸ್ಸಿನಲ್ಲಿಯ ಕಲ್ಮಶಗಳನ್ನು, ಅಹಂಕಾರಗಳನ್ನು ಹೊರಹಾಕಿ, ದೇವರ ಪ್ರೀತಿಯನ್ನು, ಅನುಗ್ರಹವನ್ನು ಪಡೆಯಬೇಕು.

ಉದಾಹರಣೆಗಳು:

- ಹೇಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ ....
- ಮಧ್ವರಾಯರ ದೇವತಾರ್ಚನೆಯ ....

## 6. ವಂದನ

ಭಗವಂತನಲ್ಲಿ ಸಂಪೂರ್ಣ ಶರಣಾಗತಿ ಸ್ವೀಕರಿಸಿ ಹೃದಯದಲ್ಲಿ ಆತನ ಧ್ಯಾನ ಮಾಡುವುದೇ ವಂದನ ಭಕ್ತಿ. ಸಂಸ್ಕೃತದಲ್ಲಿ ವಂದನಂ ಪದಕ್ಕೆ ವಧಿ, ಅಭಿವಾದನ (ಸಾಷ್ಟಾಂಗ-ನಮಸ್ಕಾರ), ಸ್ತುತಿ ಎನ್ನುವ ಅರ್ಥಗಳಿವೆ.
ವಂದನೆಯು ಕೃತಜ್ಞತೆಯನ್ನು ವ್ಯಕ್ತಪಡಿಸಲು ದೇವತೆ, ಗುರು ಅಥವಾ ಪವಿತ್ರ ವ್ಯಕ್ತಿಯ ಮುಂದೆ ಸಾಷ್ಟಾಂಗ (ಎಂಟು ಅಂಗಗಳಿಂದ) ನಮಸ್ಕಾರವನ್ನು ಮಾಡುವುದಾಗಿದೆ. ಒಂದೇ ದೇವರಾಗಿರುವ ಎಲ್ಲಾ ಜೀವಿಗಳಿಗೆ ನಮಸ್ಕರಿಸುವುದು - ಇದು ವಂದನೆ. ನಾಯಿ, ಕತ್ತೆ, ಚಾಂಡಾಲ, ಹಸು ಸೇರಿದಂತೆ ಎಲ್ಲ ಜೀವಿಗಳಿಗೂ ನಮಸ್ಕರಿಸಿ ಪೂಜಿಸಬೇಕೆಂದು ಶ್ರೀಕೃಷ್ಣನು ಹೇಳಿದ್ದಾನೆ.

ಭಗವಂತನಲ್ಲಿ ಸಂಪೂರ್ಣ ಶರಣಾಗತಿ ಹೊಂದಿ ಹೃದಯದಲ್ಲಿ ಸಂಪೂರ್ಣವಾಗಿ ಆತನ ಧ್ಯಾನ ಮಾಡುವುದೇ ವಂದನಭಕ್ತಿ. ತನ್ನ ಮೊರೆ ಈಶ್ವರನವರೆಗೆ ತಲುಪಬೇಕೆಂದು ಮಾಡಲಾಗುವ ಭಾವಪೂರ್ಣ ಪ್ರಾರ್ಥನೆಯು ಈ ವಿಧದಲ್ಲಿಯೇ ಬರುತ್ತದೆ.

ಪ್ರದಕ್ಷಿಣೆ ನಮಸ್ಕಾರ, ಹೆಜ್ಜೆ ನಮಸ್ಕಾರ ಹೀಗೆ ಅನೇಕ ವಿಧಗಳಲ್ಲಿ ದೇವರಿಗೆ ವಂದಿಸುವಾಗ ಶ್ರವಣ, ಕೀರ್ತನ, ಸ್ಮರಣಗಳೊಂದಿಗೆ ದೇವರ ಸ್ತೋತ್ರಗಳನ್ನು ಸ್ತುತಿಸುತ್ತಾ ಮಾಡಬೇಕು. ಈ ಚರಾಚರ ಸೃಷ್ಟಿ ಆತನ ಅಧೀನ ಎಂದು ಧ್ಯಾನಿಸುತ್ತಾ, ಹರಿಯೇ ಸರ್ವೋತ್ತಮನೆಂದು ತಿಳಿಯುತ್ತಾ ವಂದಿಸುವುದೇ ಮುಖ್ಯ. ಯಾವ ಕೆಲಸ, ಕಾರ್ಯವನ್ನು ಮಾಡುವ ಮೊದಲು ದೇವರಿಗೆ ವಂದಿಸಿ ಮಾಡುವುದೇ ದೇವರಿಗೆ ಪ್ರೀತಿ.

ಉದಾಹರಣೆಗಳು:

- ವಂದಿಸುವುದಾದಿಯಲಿ ಗಣನಾಥನ ....
- ವಂದಿಸಿದವರೇ ಧನ್ಯರು ನಮ್ಮ ಇಂದಿರಾಪತಿ ....

# 7. ದಾಸ್ಯ

ಈ ಸಂಸ್ಕೃತ ಪದದ ಅರ್ಥ "ಸೇವೆ" ಅಥವಾ "ಗುಲಾಮಗಿರಿ". ದಾಸ್ಯವು ದಾಸ್ಯದ ಮೂಲಕ ವ್ಯಕ್ತಪಡಿಸುವ ದೇವರ ಮೇಲಿನ ಪ್ರೀತಿ ಮತ್ತು ಭಕ್ತಿ. ಅಂದರೆ ದೇವರನ್ನು ಅಥವಾ ಗುರುವನ್ನು ಸಮರ್ಪಣಾ ಭಾವದಿಂದ ಸೇವೆ ಮಾಡುವುದು.

ದೇವಸ್ಥಾನವನ್ನು ಶುಚಿಗೊಳಿಸುವುದು, ಬಡವರ, ದೀನ ದಲಿತರ, ರೋಗಿಗಳ ಸೇವೆ ಮಾಡುವುದು, ಋಷಿ ಮುನಿಗಳ ಸೇವೆ ಮಾಡುವುದು, ಧರ್ಮಗ್ರಂಥಗಳನ್ನು ಧ್ಯಾನಿಸುವುದು ಅಥವಾ ದೇವರ ಸೇವಕನಾಗಿ ಯಾವುದೇ ಕೆಲಸವನ್ನು ಮಾಡುವುದು - ಇದು ದಾಸ್ಯ ಭಕ್ತಿ.

ಭಗವಂತನೇ ನನ್ನ ತಂದೆ-ತಾಯಿ ಹಾಗೂ ಸರ್ವಸ್ವ ಮತ್ತು ನಾನು ಆತನ ಪುತ್ರ, ಸೇವಕನಾಗಿದ್ದೇನೆ ಎಂಬ ಭಾವನೆಯಿಂದ ಸೇವೆ ಮಾಡುವುದನ್ನು ದಾಸ್ಯ ಭಕ್ತಿ ಎನ್ನುತ್ತಾರೆ. ನಮ್ಮ ಶ್ವಾಶ - ಉಚ್ವಾಶಗಳು ನಮಗೆ ತಿಳಿಯದೆ ಹೇಗೆ ಪ್ರಾಣ ದೇವರು ನಡೆಸುತ್ತಾನೋ, ಅದೇ ತರಹ ಪರಮಾತ್ಮನ ಗುಣ ಪೂರ್ಣತ್ವ ಮತ್ತು ಸ್ವಾಮಿತ್ವ(ನನಗೆ ಮತ್ತು ಎಲ್ಲರಿಗೂ) ಅನುಸಂಧಾನ ಪೂರಕವಾಗಿ ಬಂದರೆ ಅದು ದಾಸತ್ವದ ನಿರ್ವಚನ.

ಮಮ ಸ್ವಾಮೀ ಹರಿಃ ನಿತ್ಯಂ ಸರ್ವಸ್ಯ ಪತಿರೇವ ಚ ಎನ್ನುವುದು ದಾಸ್ಯ ಭಾವದ ಮುಖ್ಯ ಉದ್ದೇಶವಾಗಿದೆ. ಪರಮಾತ್ಮನೇ ನನಗೆ ಸ್ವಾಮಿ, ನಾನು ಆತನ ದಾಸಾನು ದಾಸ ಎನ್ನುವುದೇ ಇದರ ಅರ್ಥವಾಗಿದೆ. ಪರಮಾತ್ಮನ ದಾಸರಲ್ಲಿ ಪರಮ ಶ್ರೇಷ್ಠನಾದವರು ಮುಖ್ಯಪ್ರಾಣ ದೇವರು.

ಉದಾಹರಣೆಗಳು:

- ನಾಚಿಕೆ ಗೊಳಬೇಡ ಮನದಲಿ ಯೋಚಿಸಿ ಕೆಡಬೇಡ ....
- ಲಜ್ಜೆ ಬಿಟ್ಟು ಕುಣಿಯೋರೆಂದು ಕಾಗದ ಬಂದಿದೆ, ಹೆಜ್ಜೆ ಹೆಜ್ಜೆಗೆ ಹರಿ ಎನ್ನಿರೆಂಬೋ ಕಾಗದ ಬಂದಿದೆ ....
- ದಾಸನ ಮಾಡಿಕೊ ಎನ್ನ ....
- ದಾಸನಾಗು ವಿಶೇಷನಾಗು ....

## <u>8. ಸಖ್ಯ</u>

ಪರಮಾತ್ಮನಲ್ಲಿ ಸದಾ ಪ್ರೇಮಪೂರ್ವಕವಾದ ಭಕ್ತಿ ಇರಬೇಕು. ಅದೇ ಸಖ್ಯ ಭಕ್ತಿ ಎನ್ನುವುದು.

ಭಗವಂತನು ನನ್ನ ಸಖನು (ಮಿತ್ರ) ಅಥವಾ ಬಂಧು ಆಗಿದ್ದು ನನ್ನ ಸುಖ-ದುಃಖಗಳಲ್ಲಿ ಸಹಭಾಗಿಯಾಗಿದ್ದಾನೆ ಎನ್ನುವ ಭಾವನೆಯಿಂದ ಭಕ್ತಿ ಮಾಡುವುದನ್ನು ಸಖ್ಯ ಭಕ್ತಿ ಎನ್ನುತ್ತಾರೆ. ಶ್ರೀಕೃಷ್ಣನ ಮೇಲೆ ಅರ್ಜುನನಿಗಿದ್ದ ಭಕ್ತಿಯು ಸಖ್ಯ ಭಕ್ತಿಯ ಅನುಪಮ ಉದಾಹರಣೆಯಾಗಿದೆ.

ಸಖ್ಯ ಭಕ್ತಿಯು ದೇವರೊಂದಿಗೆ ಸ್ನೇಹಿತರಾಗುವುದು. ಅವನು ಆತ್ಮೀಯ ಸ್ನೇಹಿತ ಅಥವಾ ಸಂಬಂಧಿಯಾಗುತ್ತಾನೆ. ಆತ್ಮೀಯ ಸ್ನೇಹಿತರಂತೆ, ಭಕ್ತನು ಯಾವಾಗಲೂ ದೇವರೊಂದಿಗೆ ಒಟ್ಟಿಗೆ ಇರುತ್ತಾನೆ ಮತ್ತು ತನ್ನಂತೆಯೇ ಅವನನ್ನು ಪ್ರೀತಿಸುತ್ತಾನೆ. ಭಕ್ತನು ದೇವರಿಗಾಗಿ ಏನನ್ನಾದರೂ ಮಾಡಲು ಬಯಸುತ್ತಾನೆ ಮತ್ತು ಇತರ ಪ್ರಮುಖ ಅಥವಾ ತುರ್ತು ಕೆಲಸವನ್ನು ನಿರ್ಲಕ್ಷಿಸುತ್ತಾನೆ. ವಿಭೀಷಣ, ಉದ್ಧವ, ಸುಗ್ರೀವ, ಸುದಾಮ, ಅರ್ಜುನ, ಇತ್ಯಾದಿ, ಈ ರೀತಿಯ ಭಕ್ತಿ ಅಥವಾ ಸಖ್ಯ ಭಾವವನ್ನು ವ್ಯಕ್ತಪಡಿಸಿದ ಭಕ್ತರ ಉದಾಹರಣೆಗಳಾಗಿವೆ.

ತ್ವಮೇವ ಮಾತಾ ಚ ಪಿತಾ ತ್ವಮೇವ
ತ್ವಮೇವ ಬಂಧುಶ್ಚ ಸಖಾ ತ್ವಮೇವ
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವಾ ದೇವಾ
ಎಂದು ಪರಮಾತ್ಮನನ್ನು ಸರ್ವವೂ ನೀನೇ ಎಂದು ಪೂಜಿಸಬೇಕು.

ಸದಾ ಕಾಲದಲ್ಲಿ ತಂದೆ, ತಾಯಿಯಂತೆ ಕಾಯುವ ಪರಮಾತ್ಮ ಸಖನಾಗಿಯೂ ಜೊತೆಗಿದ್ದಾನೆ. ತನ್ನ ಮಗನಾದ ವಾಯುದೇವರಿಗೂ, ಮೊಮ್ಮಗನಾದ ರುದ್ರ ದೇವರಿಗೂ ಸಖನಾಗಿದ್ದಾನೆ.

ದಾಸರು ತಮ್ಮ ಕೃತಿಗಳಲ್ಲಿ ಮುದ್ದಾಗಿ ಬಾರೋ, ಕೂಡೋ, ನೀಡೋ ಎಂದು ಸಖನನ್ನು ಕರೆದಂತೆ ಕರೆಯುತ್ತಾರೆ. ಸದಾ ಬಿಡದೆ ಇರುವ ಪ್ರಾಣ ಸ್ನೇಹಿತನೇ ಶ್ರೀ ಹರಿ ಎನ್ನುವ ಭಾವವನ್ನು ನಮಗೆ ಒತ್ತಿ ಒತ್ತಿ ತೋರಿಸಿದ್ದಾರೆ.

ಉದಾಹರಣೆಗಳು:

- ನೆರೆ ನಂಬಿದೆ ಮದ್ ಹೃದಯ ಮಂಟಪದೊಳು ....
- ಆಡ ಹೋಗೋಣ ಬಾರೋ ರಂಗ ....
- ನಾನೇಕೆ ಬಡವನು ನಾನೇಕೆ ಪರದೇಶಿ ....
- ಕೃಷ್ಣ ಬಾರೋ ಶ್ರೀ ಕೃಷ್ಣ ಬಾರೋ ....

# 9. ಆತ್ಮ ನಿವೇದನ

ನವವಿಧ ಭಕ್ತಿಯಲ್ಲಿಯ ಕೊನೆಯ ಮೆಟ್ಟಿಲು ಅನ್ನೋದಕ್ಕಿಂತ ಪರಮಾತ್ಮನ ಪ್ರಸನ್ನತೆಗೆ ಇರಬೇಕಾದ ಮುಖ್ಯ ಭಕ್ತಿ ಎಂದರೆ ಆತ್ಮನಿವೇದನ. ಎಲ್ಲವನ್ನೂ ಭಗವಂತನಲ್ಲಿ ಮುಕ್ತವಾಗಿ ಮಂಡಿಸುವುದು ಹಾಗೂ ತನ್ನ ಎಲ್ಲ ಭಾರವನ್ನೂ ಭಗವಂತನಿಗೆ ಒಪ್ಪಿಸುವುದೇ ಆತ್ಮನಿವೇದನ ಭಕ್ತಿ. ತನ್ನನ್ನು ತಾನೇ ದೇವರಿಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದು.

ಆತ್ಮ-ನಿವೇದನೆಯಲ್ಲಿ, ಭಕ್ತನು ತನ್ನ ದೇಹ, ಮನಸ್ಸು ಮತ್ತು ಆತ್ಮವನ್ನು ದೇವರಿಗೆ ಅರ್ಪಿಸುತ್ತಾನೆ ಮತ್ತು ಅವನಲ್ಲಿ ಆಶ್ರಯ ಪಡೆಯುತ್ತಾನೆ. ಅವನು ಯಾವಾಗಲೂ ಸಾರ್ವತ್ರಿಕ ಉದ್ದೇಶದಿಂದ ಮಾರ್ಗದರ್ಶಿಸಲ್ಪಡುತ್ತಾನೆ. ಅದು ಸಂತೋಷವಾಗಲಿ, ದುಃಖವಾಗಲಿ, ಭಕ್ತನು ಅದನ್ನು ದೇವರ ಉಡುಗೊರೆಯಾಗಿ ನೋಡುತ್ತಾನೆ. ಅವನು ತನ್ನನ್ನು ದೇವರ ಸಾಧನವಾಗಿ ನೋಡುತ್ತಾನೆ. ಮನಸಾ,

ವಾಚಾ, ಕರ್ಮಣಾ ನಮ್ಮನ್ನು ನಾವು ಸಮರ್ಪಣೆ ಮಾಡಿಕೊಂಡು ಶ್ರೀ ಹರಿಯೇ ನೀನೇ ಗತಿಯೆನ್ನುವುದೇ ಆತ್ಮನಿವೇದನೆ ಎನಿಸಿಕೊಳ್ಳುತ್ತದೆ.

ಆತ್ಮನಿವೇದನ ಉತ್ಕೃಷ್ಟವಾದ ಹಂತ ಎಂದು ಹೇಳಬಹುದು. ಭಾಗವತದಲ್ಲಿ ಒಂಬತ್ತು ಸ್ಕಂದಗಳ ನವವಿಧ ಭಕ್ತಿಯ ತೋರಿದ ತನ್ನ ಭಕ್ತರ ಕಥೆ ನಂತರ ಶ್ರೀಕೃಷ್ಣನ ದಶಮ ಸ್ಕಂದ ಬರುತ್ತದೆ. ಮೊದಲು ತನ್ನ ಭಕ್ತರ ಮಹಿಮೆ ಆದಮೇಲೆ ಕೃಷ್ಣನ ಮಹಿಮೆ. "ಭಕುತ ಜನ ಮುಂದೆ ನೀನವರ ಹಿಂದೆ" ಎನ್ನುವಂತೆ ಭಕ್ತಿಯ ಪರಾಕಾಷ್ಠೆ ಏನು ಅಂದರೆ ಅದು ಕೃಷ್ಣನ ಆಗಮನ.

ಕೃಷ್ಣ ಹೇಳಿದ " ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕ ಶರಣಂ ವ್ರಜ .." ಅವೈಷ್ಣವ ಧರ್ಮಗಳನ್ನ ಬಿಟ್ಟು ನನಗೆ ಯಾರು ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಾರೋ ಅವರಿಗೆ ಮೋಕ್ಷ ಕೊಡುತ್ತೇನೆ" ಎನ್ನುವುದು ಕೃಷ್ಣನ ಪ್ರತಿಜ್ಞೆ. ಅಲ್ಲದೇ, ಮೋಕ್ಷದ ನಂತರವೂ ಪರಮಾತ್ಮನ ಅಧೀನವೆನ್ನುವ ಮಾತನ್ನು ಮರಿಯತಕ್ಕದ್ದಲ್ಲ. ಉದಾಹರಣೆಗಳು: ಗೋಪಿಯರು, ಬಲಿ ಮಹಾರಾಜ, ರಾಮ ಆನುಜ ಲಕ್ಷ್ಮಣ ಮತ್ತು ಭರತ.

ಮಹಾಭಾರತದಲ್ಲಿಯೂ ಭರತನ ಆತ್ಮನಿವೇದನ ತೋರಿಸಿದ್ದಾರೆ ವ್ಯಾಸರು. "ಭರತನು ಕಾಡಿನಿಂದ ಮರಳಿ ಬಂದಿರುವ ಶ್ರೀ ರಾಮಚಂದ್ರನಿಗೆ ತುಂಬಾ ಹರ್ಷದಿಂದ ಅತ್ಯಂತ ಸತ್ಕಾರ ಪೂರ್ವಕ ಒಪ್ಪಿಸಿದನು." ಇಲ್ಲಿ ನಾವು ಗಮನಿಸಿದ ಬೇಕಾದ ಇನ್ನೊಂದು ಅಂಶವೆಂದರೆ, ಲಕ್ಷ್ಮಣನು ತನ್ನ ಪತ್ನಿಯನ್ನ ತೊರೆದು ಶ್ರೀರಾಮನ ಸೇವೆಗಾಗಿ ತನ್ನನ್ನು ತಾನು ಸಮರ್ಪಿಸಿದ. ಇದು ಆತ್ಮನಿವೇದನೆ ಅಲ್ಲದೆ ಇನ್ನೇನು.

ಹರಿದಾಸರ ಅನೇಕ ಪದಗಳಲ್ಲಿ ಈ ಆತ್ಮನಿವೇದನಾ ಭಾವವನ್ನು, ದಾಸರು ತಮ್ಮನ್ನು ತಾವೇ ಭಗವಂತನಿಗೆ ನಿವೇದಿಸಿಕೊಂಡದ್ದನ್ನು ಕಾಣುತ್ತೇವೆ. ಉದಾಹರಣೆಗಳು:

- ತೊರೆದು ಜೀವಿಸ ಬಹುದೇ ಹರಿ ನಿನ್ನ ಚರಣಗಳ....
- ಇಟ್ಟಂಗೆ ಇರುವೆನೋ ಹರಿಯೇ ....
- ನಿನ್ನನೇ ನಂಬಿದೆ ನೀರಜನಯನ ....
- ನಾನೇಕೆ ಬಡವನು ನಾನೇಕೆ ಪರದೇಶಿ ....
- ಹರಿ ನೀನೇ ಗತಿಯೆಂದು ನೆರೆನಂಬಿದವರನು ....

*************************